# ಅಜಿರಿಗೆ ಒಂದು ಹೊಸ ಮನೆ



## ಹಾಗೆಂದರೇನು?

ಅಜಿರಿಗೆ ಒಂದು ಹೊಸ ಮನೆ ಎನ್ನುವುದು 8–10 ವರ್ಷದ ಮಕ್ಕಳಿಗೆ ಒಂದು ಸೊಗಸಾದ ಕಥೆ. ಇದು ನಡೆಯುವುದು ಕಛ್ ಪ್ರಾಂತ್ಯದಲ್ಲಿ. ಅಜಿರಿ ಎಂಬ ಹೆಸರಿನ ಒಂದು ಎಳೆಯ ಜಿಂಕೆಮರಿಯು ಒಂದು ನಾಯಿಗಳ ಹಿಂಡಿನ ಆಕ್ರಮಣದಿಂದ ಗಾಯಗೊಳ್ಳುತ್ತಾಳೆ ಹಾಗೂ ತನ್ನ ತಾಯಿಯಿಂದ ಬೇರೆಯಾಗುತ್ತಾಳೆ. ಶಿವಮ್ ಎಂಬ ಒಬ್ಬ ಚಿಕ್ಕ ಹುಡುಗ ಮತ್ತು ಗಾಯಗೊಂಡ ಪ್ರಾಣಿಗಳನ್ನು ಹೇಗೆ ಉಪಚರಿಸಬೇಕೆಂದು ತಿಳಿದಿರುವ ಅವನ ತಂದೆಯು ಮಾಡುವ ಔಷಧೋಪಚಾರಗಳಿಂದ ಅಜಿರಿ ಗುಣಮುಖಳಾಗುತ್ತಾಳೆ. ಆಮೇಲೆ, ಮಿಟ್ಟಿ ಎಂಬ ಚಿಕ್ಕ ಹುಡುಗಿ ಮತ್ತು ಅವಳ ಪಶುಪಾಲಕ ಕುಟುಂಬದವರು ಅವಳ ಯೋಗಕ್ಷೇಮ ನೋಡಿಕೊಳ್ಳುತ್ತಾರೆ. ಅಜಿರಿ ಮತ್ತು ಅವಳ ತಾಯಿ ಮತ್ತೆ ಒಂದಾಗುವ ಕೆಲವು ಪರಿಣಾಮಕಾರಿ ದೃಶ್ಯಗಳೊಂದಿಗೆ ಹಾಗೂ ಒಬ್ಬ ಕಳ್ಳ ಬೇಟೆಗಾರನು ಜಿಂಕೆಗಳ ಒಂದು ಹಿಂಡಿನ ಮೇಲೆ ಗುಂಡು ಹಾರಿಸಿದಾಗ ಅಜಿರಿ ಅದಕ್ಕೆ ಯಾವ ರೀತಿ ಪ್ರತಿಕ್ರಿಯಿಸುತ್ತದೆ ಎನ್ನುವುದರೊಂದಿಗೆ ಕಥೆ ಮುಗಿಯುತ್ತದೆ.

ಕಾಳಜಿ ಮತ್ತು ನಂಬಿಕೆಗಳೆಂಬ ಎರಡು ಮೌಲ್ಯಗಳ ಮೇಲೆ ಈ ಕಥೆ ನಿಂತಿದೆ. ಈ ಕಥೆಯಲ್ಲಿನ ಮನುಷ್ಯ ಪಾತ್ರಗಳು (ಸಹಜವಾಗಿ, ಕಳ್ಳ ಬೇಟೆಗಾರನನ್ನು ಹೊರತುಪಡಿಸಿ) ತಮ್ಮ ಅನೇಕ ಕ್ರಿಯೆಗಳು ಮತ್ತು ನಿರ್ಧಾರಗಳ ಮೂಲಕ ಅಜಿರಿಯ ಕುರಿತು ಗಾಢವಾದ ಕಾಳಜಿಯನ್ನು ವ್ಯಕ್ತಪಡಿಸುತ್ತವೆ. ಇದು, ಅಜಿರಿ, ಮಾನವರನ್ನು ನಂಬುವಂತೆ ಮಾಡುತ್ತದೆ... ಎಷ್ಟರ ಮಟ್ಟಿಗೆ ಎಂದರೆ ಅದು ಅವಳನ್ನು ಕಳ್ಳ ಬೇಟೆಗಾರನಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ದಾರಿ ತೋರಿಸುತ್ತದೆ.




**ಅಜಿರಿಗೆ ಒಂದು ಹೊಸ ಮನೆ**
ಕಥೆ: ಸಂದೀಪ್ ವೀರ್ ಮಣಿ । ನಿರೂಪಣೆ: ನಿಲೊಫರ್ ವಾಡಿಯಾ

## ಮಕ್ಕಳ ಜೊತೆಗೆ ಚರ್ಚಿಸಿ

ಈ ಪ್ರತಿಯೊಂದು ಮೌಲ್ಯಗಳು ಮಕ್ಕಳಿಗೆ ಮಹತ್ವದ ಚರ್ಚೆಗಳಿಗೆ ಹಾಗೂ ಆಲೋಚನೆಯ ಅಂಶಗಳಿಗೆ ಆಧಾರವಾಗಬಹುದು. ಕಾಳಜಿ ವಹಿಸುವ ಮೌಲ್ಯದ ಕುರಿತ ಕೆಲವು ವಿಷಯಗಳು ಹೀಗಿವೆ:

- ಮಕ್ಕಳಿಗೆ, ತಮ್ಮ ಕುಟುಂಬದ ಸದಸ್ಯರಾಗಲೀ ಅಥವಾ ಸ್ನೇಹಿತರಾಗಲೀ ತಮ್ಮೆಡೆ ಕಾಳಜಿ ತೋರಿಸಿದ್ದಾರೆ ಎಂದು ಯಾವಾಗ ಅನಿಸಿದೆ? ಯಾರಾದರೂ ತಮ್ಮ ಬಗ್ಗೆ ಕಾಳಜಿ ತೋರಿಸಿದಾಗ ಅವರಿಗೆ ಏನನ್ನಿಸುತ್ತದೆ?
- ಅವರು ಬೇರೆಯವರ ಕುರಿತು ಕಾಳಜಿ ವಹಿಸಿದ್ದು ಯಾವಾಗ? ಅಂತಹ ಸಂದರ್ಭದಲ್ಲಿ ಅವರಿಗೆ ಏನನ್ನಿಸುತ್ತದೆ?
- ಅವರ ಬಳಿ ಹಿಂದೆ ಯಾವಾಗಲಾದರೂ ಸಾಕುಪ್ರಾಣಿ ಇತ್ತೇ ಅಥವಾ ಈಗ ಇದೆಯೇ? ಅವರು ಹೇಗೆ ಅದರ ಕಾಳಜಿ ವಹಿಸುತ್ತಾರೆ?
- ವನ್ಯಜೀವಿಗಳ ಕುರಿತು ಕಾಳಜಿ ವಹಿಸುವ ಕೆಲವು ವಿವಿಧ ವಿಧಾನಗಳು ಯಾವುವು?
- ಸಸ್ಯಗಳ ವಿಷಯದಲ್ಲಿ ಹೇಗೆ? ಸಸ್ಯಗಳ ಕುರಿತು ಕಾಳಜಿ ವಹಿಸುವುದು ಪ್ರಾಣಿಗಳ ಕುರಿತು ಕಾಳಜಿ ವಹಿಸುವುದಕ್ಕಿಂತ ಭಿನ್ನವೇ?
- ವಿಭಿನ್ನ ಜೀವಿಗಳ ಕುರಿತು ಕಾಳಜಿ ವಹಿಸುವ ವಿಭಿನ್ನ ರೀತಿಗಳು ಹಾಗೂ ಹಂತಗಳಿವೆಯೇ?




**ಕಛ್ ಮೂಲಕ ಖಾರಿಯ ಪಯಣಗಳು**




**ಶೇರೊ ರಕ್ಷಿಸುತ್ತದೆ**

## ನಂಬಿಕೆಯ ಮೌಲ್ಯದ ಕುರಿತು ಕೆಲವು ಪ್ರಶ್ನೆಗಳು

- ಅವರ ಬಗ್ಗೆ ಅವರ ಹಿರಿಯರು ನಂಬಿಕೆ ಇಟ್ಟಿದ್ದರು ಎನ್ನುವಂತಹ ಸಂದರ್ಭಗಳನ್ನು ಅವರು ವಿವರಿಸಬಹುದೇ? ಅವರಲ್ಲಿ ನಂಬಿಕೆಯಿಟ್ಟಾಗ ಅವರಿಗೆ ಹೇಗನಿಸುತ್ತದೆ??
- ಅವರಿಗೆ ತಮ್ಮ ಸ್ನೇಹಿತರಲ್ಲಿ ನಂಬಿಕೆ ಇದೆಯೇ? ಅದನ್ನು ಹೇಗೆ ತೋರ್ಪಡಿಸಿದ್ದಾರೆ?
- ಪ್ರಾಣಿಗಳು ತಮ್ಮ ಮೇಲೆ ನಂಬಿಕೆ ಇಟ್ಟಿವೆ ಎಂದು ಅವರಿಗೆ ಅನಿಸಿದೆಯೇ? ಇವು ಸಾಕುಪ್ರಾಣಿಗಳೇ ಅಥವಾ ಕಾಡುಪ್ರಾಣಿಗಳೇ? ಈ ನಂಬಿಕೆಯ ಬಗ್ಗೆ ಅವರಿಗೆ ಹೇಗನಿಸುತ್ತದೆ??

ಈ ಕಥೆಯು ಕಛ್ ಪ್ರಾಂತ್ಯ ಹಾಗೂ ಅದರ ವನ್ಯಜೀವಿಗಳು, ಜೊತೆಗೆ ಅಲೆಮಾರಿ ಪಶುಪಾಲಕರು ಮತ್ತು ಅವರ ಸರಳ ಜೀವನಶೈಲಿಗಳ ಕುರಿತು ಕೆಲವು ಸಂಕ್ಷಿಪ್ತ ನೋಟಗಳನ್ನು ಸಹ ನೀಡುತ್ತದೆ. ವನ್ಯಜೀವಿಗಳ ಕುರಿತ ನಮ್ಮ ಕಾನೂನುಗಳಡಿಯಲ್ಲಿನ ಕೆಲವು ಒದಗಣೆಗಳಿಗೆ ಸಂಬಂಧಿಸಿದ ಪ್ರಕಾಶಕರ ಟಿಪ್ಪಣಿಯೊಂದಿಗೆ ಪುಸ್ತಕ ಕೊನೆಗೊಳ್ಳುತ್ತದೆ. ಮಕ್ಕಳು ಗಾಯಗೊಂಡ ಕಾಡುಪ್ರಾಣಿಯೊಂದನ್ನು ನೋಡಿದರೆ ಆಗ ಅವರು ಏನು ಮಾಡಬೇಕು ಎಂದು ಯೋಚಿಸುವಂತೆ ಮಾಡಲು ಇದನ್ನು ಉಪಯೋಗಿಸಬಹುದು.

## ಇನ್ನೂ ಇದೆ!

ಕಲ್ಪವೃಕ್ಷ್ ಪ್ರಕಟಿತ **ಕಛ್** ಪ್ರಾಂತ್ಯದ ಮೂರನೆ ಕಥೆ ಇದು. **ಕಛ್ ಮೂಲಕ ಖಾರಿಯ ಪಯಣಗಳು** ಎಂಬ ಶೀರ್ಷಿಕೆಯ ಮೊದಲನೆಯ ಕಥೆಯು **ಖಾರಿ** ಎಂಬ ಕೊಕ್ಕರೆಯ ಮೂಲಕ **ಕಛ್**‌ನ ವಿವಿಧ ಪರಿಸರ ವ್ಯವಸ್ಥೆಗಳನ್ನು ಮಕ್ಕಳಿಗೆ ಪರಿಚಯಿಸುತ್ತದೆ. **ಖಾರಿ,** ಮೊದಲ ಬಾರಿಗೆ, ಈ ಪ್ರದೇಶದ ಮೂಲಕ ವಲಸೆ ಹೋಗುತ್ತಿರುವ ಒಂದು ಪ್ರಾಯದ ಹೆಣ್ಣು ಕೊಕ್ಕರೆ. **ಶೇರೊ ರಕ್ಷಿಸುತ್ತದೆ** ಎಂಬ ಶೀರ್ಷಿಕೆಯ ಎರಡನೆಯ ಕಥೆಯು, ಈ ಪರಿಸರ ವ್ಯವಸ್ಥೆಗಳಲ್ಲಿ ವಾಸಿಸುವ ಅನೇಕ ಕಾಡುಪ್ರಾಣಿಗಳನ್ನು ಮಕ್ಕಳಿಗೆ ಪರಿಚಯಿಸುತ್ತದೆ. ಮುಳ್ಳುಹಂದಿಯು (ಶೇರೊ ಎಂಬ ಹೆಸರಿನ) ಅದರ ಮುಖ್ಯ ನಾಯಕ. ಈ ಎರಡು ಪುಸ್ತಕಗಳನ್ನು ಮೊದಲು ಗುಜರಾತಿ ಭಾಷೆಯಲ್ಲಿ ಪ್ರಕಟಪಡಿಸಲಾಗಿತ್ತು. ಸರ್ಕಾರಿ ಶಾಲಾ ಮಕ್ಕಳಿಗೆ ಸ್ಥಳೀಯ ಪರಿಸರ ವ್ಯವಸ್ಥೆಯ ಕುರಿತಾದ ಶೈಕ್ಷಣಿಕ ಮಾಹಿತಿಗಳನ್ನು ಸಿದ್ಧಪಡಿಸುವ ನಿಟ್ಟಿನ ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ವ್ಯಾಪಕವಾದ ಕಾರ್ಯಕ್ರಮದ ಭಾಗವಾಗಿ ಈ ಮೂರು ಕಥೆಗಳನ್ನು ಬರೆಯಲಾಯಿತು. ಈ ಮೂರೂ ಪುಸ್ತಕಗಳು ಕೇವಲ ಈ ಪ್ರಾಂತ್ಯದಲ್ಲಲ್ಲದೆ, ಭಾರತದ ಇತರೆಡೆಗಳಲ್ಲೂ ಸಹ, ಮಕ್ಕಳ ಪುಸ್ತಕ ಓದುವ ಕಾರ್ಯಕ್ರಮಗಳಿಗೆ ವಿಶೇಷ ಆಯಾಮವನ್ನು ಒದಗಿಸುತ್ತದೆಂಬುದು ನಮ್ಮ ನಿರೀಕ್ಷೆ.

## ಇದನ್ನು ಹೇಗೆ ಪಡೆದುಕೊಳ್ಳಬೇಕು

32-ಪುಟಗಳ ಈ ಪುಸ್ತಕದ ಪ್ರತಿಯನ್ನು ಪಡೆದುಕೊಳ್ಳಲು, kalpavriksh.org/our-storeಗೆ ಭೇಟಿ ನೀಡಿ ಅಥವಾ kvbooks@gmail.comಗೆ ಬರೆಯಿರಿ.

ಕಲ್ಪವೃಕ್ಷ್ ಸಂಸ್ಥೆಯ ಸದಸ್ಯರಾದ **ಸುಜಾತ ಪದ್ಮನಾಭನ್,** ವನ್ಯಜೀವಿಗಳು, ನಿಸರ್ಗ ಮತ್ತು ಪರಿಸರದ ಕುರಿತಾದ ಮಕ್ಕಳ ಪುಸ್ತಕಗಳ ಪ್ರಕಟಣೆಯ ಸಂಯೋಜಕರು. ಇವರು ಮಕ್ಕಳಿಗಾಗಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ ಹಾಗೂ ಶಾಲೆಗಳಿಗೆ ಶೈಕ್ಷಣಿಕ ಮಾಹಿತಿಗಳನ್ನು ಸಹ ಸಿದ್ಧಪಡಿಸಿದ್ದಾರೆ. ಇವರ ಸಂಪರ್ಕ: sujikahalwa@gmail.com.

ಅನುವಾದ: **ಎಚ್. ಜಿ. ಜಯಲಕ್ಷ್ಮಿ** | ಪರಿಶೀಲನೆ: **ಮನೋಜ ಗೋಡಬೋಲೆ**